ಬೀದರ್ ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ ಇಲ್ಲಿಯವರೆವಿಗೂ 3.6 ಕೋಟಿ ಹಣವನ್ನು ಬಿಡುಗಡೆ ಮಾಡಲಾಗಿದ್ದು ಟರ್ಮಿನಲ್ ಕಟ್ಟಡ ನಿರ್ಮಾಣ ಪೂರ್ಣಗೊಂಡಿರುತ್ತದೆ. (ರೂ.3.00 ಕೋಟಿ ಟರ್ಮಿನಲ್ ಕಟ್ಟಡ ನಿರ್ಮಾಣಕ್ಕಾಗಿ ಮತ್ತು 60.49 ಲಕ್ಷಗಳು ಭೂ ಸ್ವಾಧೀನಕ್ಕಾಗಿ)

ರಾಜ್ಯದಲ್ಲಿ ವಸತಿ ಯೋಜನೆಗಳ ಅನುಷ್ಠಾನದ ಬಗ್ಗೆ

45(149): ಶ್ರೀ ಹ್ಯಾರಿಸ್ ಎನ್. ಎ. (ಶಾಂತಿನಗರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಅನುಷ್ಠಾನಗೊಂಡ ಕೇಂದ್ರ ಪುರಸ್ಕೃತ ಮತ್ತು ರಾಜ್ಯ ಸರ್ಕಾರದ ವಸತಿ ಯೋಜನೆಗಳೆಷ್ಟು? (ವಿವರ ನೀಡುವುದು);

ಆ) ಕೇಂದ್ರ ಪುರಸ್ಕೃತ ವಸತಿ ಯೋಜನೆಗಳಿಗಾಗಿ ಬಿಡುಗಡೆಯಾದ ಮತ್ತು ವೆಚ್ಚ ಮಾಡಿದ ಮೊತ್ತ ಎಷ್ಟು? (ವಿವರ ನೀಡುವುದು);

ಇ) ವಸತಿ ಯೋಜನೆಗಳ ಪ್ರಮಾಣವನ್ನು ಹೆಚ್ಚಿಸಿ ವಸತಿಹೀನರಿಗೆ ಸೌಲಭ್ಯ ಕಲ್ಪಿಸಲು ಸರ್ಕಾರದ ತ್ವರಿತ ಕಾರ್ಯ ಯೋಜನೆಗಳೇನು?

ಶ್ರೀ ವಿ. ಸೋಮಣ್ಣ (ವಸತಿ ಸಚಿವರು):

ಅ) ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದಿಂದ: ಕಳೆದ ಮೂರು ವರ್ಷಗಳಲ್ಲಿ ನಿಗಮದಿಂದ ಈ ಕೆಳಗಿನಂತೆ ವಸತಿ ಯೋಜನೆಗಳನ್ನು ಅನುಷ್ಠಾನ ಗೊಳಿಸಲಾಗುತ್ತಿದೆ.

ಕೇಂದ್ರ ಪುರಸ್ಕೃತ ಯೋಜನೆ:

1. ಇಂದಿರಾ ಆವಾಸ್ ಯೋಜನೆ

ರಾಜ್ಯ ಸರ್ಕಾರದ ಯೋಜನೆ:

1. ಗ್ರಾಮೀಣ ಆಶ್ರಯ
2. ಗ್ರಾಮೀಣ ಅಂಬೇಡ್ಕರ್
3. ನಗರ ಆಶ್ರಯ

ಕರ್ನಾಟಕ ಕೊಳಗೇರಿ ಮಂಡಳಿಯಿಂದ;

ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಅನುಷ್ಠಾನಗೊಂಡ ಕೇಂದ್ರ ಪುರಸ್ಕೃತ ಮತ್ತು ರಾಜ್ಯ ಸರ್ಕಾರದ ವಸತಿ ಯೋಜನೆಗಳ ವಿವರಗಳು ಈ ಕೆಳಕಂಡಂತಿವೆ.

(ಕೋಟಿ ರೂ.ಗಳಲ್ಲಿ)

BSUP- ಯೋಜನೆ	ಮನೆಗಳ ಸಂಖ್ಯೆ	ಅಂದಾಜು ಮೊತ್ತ
ಹಂತ–1 (2006–07)	14391	324.45
ಹಂತ–2 (2007–08)	5651	215.20
ಹಂತ–3 (2008–09)	4466	184.56
ಒಟ್ಟು	**24508**	**724.21**

(ಕೋಟಿ ರೂ.ಗಳಲ್ಲಿ)

IHSDP- ಯೋಜನೆ	ಮನೆಗಳ ಸಂಖ್ಯೆ	ಅಂದಾಜು ಮೊತ್ತ
ಹಂತ–1 (2007–08)	13053	277.90
ಹಂತ–2 (2008–09)	4184	132.90
ಒಟ್ಟು		**410.80**

ಆ) ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದಿಂದ;

ಕಳೆದ 3 ವರ್ಷಗಳಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಾದ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಒಟ್ಟು ರೂ. 1035.29 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಒಟ್ಟು ರೂ.886.97 ಕೋಟಿಗಳ ಅನುದಾನವನ್ನು ಖರ್ಚು ಮಾಡಲಾಗಿದ್ದು, ವರ್ಷವಾರು ವಿವರವು ಈ ಕೆಳಗಿನಂತಿದೆ.

(ರೂ. ಲಕ್ಷಗಳಲ್ಲಿ)

ವರ್ಷ	ಬಿಡುಗಡೆ ಮಾಡಲಾದ ಅನುದಾನ			ಖರ್ಚು ಮಾಡಲಾದ ಅನುದಾನ
	ಕೇಂದ್ರ	ರಾಜ್ಯ	ಒಟ್ಟು	
2007–08	13112.77	4462.36	17575.13	13279.59
2008–09	30990.43	10703.00	41693.43	21783.86
2009–10	30196.46	14064.32	44260.78	53634.47
ಒಟ್ಟು	**74299.66**	**29229.68**	**103529.34**	**88697.92**

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ

ಯೋಜನೆ ವಿವರ	ಬಿಡುಗಡೆ	ಖರ್ಚು
ನರ್ಮ್ ಬೆಂಗಳೂರು	188.810	157.56
ನರ್ಮ್ ಮೈಸೂರು	69.08	69.08

ಐಹೆಚ್‌ಎಸ್‌ಡಿಪಿ	193.48	193.48
ಒಟ್ಟು	**451.36**	**420.12**

ಇ) ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದಿಂದ:

ವಸತಿ ಹೀನರಿಗೆ ಸೌಲಭ್ಯ ಕಲ್ಪಿಸಲು ರಾಜ್ಯದಲ್ಲಿ ಗುಡಿಸಲು ವಾಸಿಗಳ ಸಮೀಕ್ಷೆಯನ್ನು ಕೈಗೊಂಡಿದ್ದು, ಗ್ರಾಮಾಂತರ ಪ್ರದೇಶದಲ್ಲಿ 10,04,307 ಮತ್ತು ನಗರ ಪ್ರದೇಶದಲ್ಲಿ 44,399 ಗುಡಿಸಲು ವಾಸಿಗಳಿದ್ದಾರೆಂದು ಸಮೀಕ್ಷೆಯಿಂದ ತಿಳಿದುಬಂದಿದೆ.

ಈ ಗುಡಿಸಲು ವಾಸಿಗಳಿಗೆ ವಸತಿ ಸೌಲಭ್ಯ ಕಲ್ಪಿಸಲು ಗ್ರಾಮೀಣ ಪ್ರದೇಶದಲ್ಲಿ 2010–11ನೇ ಸಾಲಿನಲ್ಲಿ ಬಸವ ಇಂದಿರಾ ವಸತಿ ಯೋಜನೆ ಜಾರಿಗೆ ತಂದಿದ್ದು, ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 2000 ಮನೆಗಳ ಗುರಿ ನೀಡಿದ್ದು ಫಲಾನುಭವಿಗಳ ಆಯ್ಕೆಯು ಪ್ರಗತಿಯಲ್ಲಿರುತ್ತದೆ ಮತ್ತು ನಗರ ಪ್ರದೇಶದಲ್ಲಿ 2010–11 ನೇ ಸಾಲಿನಲ್ಲಿ ವಾಜಪೇಯಿ ವಸತಿ ಯೋಜನೆಯನ್ನು ಜಾರಿಗೆ ತರಲಾಗಿದ್ದು, 50,000 ಮನೆಗಳ ಗುರಿಯನ್ನು ನಿಗದಿ ಪಡಿಸಲಾಗಿದ್ದು, ಫಲಾನುಭವಿಗಳ ಆಯ್ಕೆಯು ಪ್ರಗತಿಯಲ್ಲಿರುತ್ತದೆ.

ಕರ್ನಾಟಕ ಗೃಹ ಮಂಡಳಿ ವತಿಯಿಂದ:

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 100 ವಸತಿ ಯೋಜನೆ 50 ಸುವರ್ಣ ಕರ್ನಾಟಕ ವಸತಿ ಯೋಜನೆ ಮತ್ತು 225 ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು ಮತ್ತು ರಾಜ್ಯ ಸರ್ಕಾರದ ಯೋಜನೆಯಾದ ನೆರೆ ಸಂತ್ರಸ್ಥರಿಗೆ ಪುನರ್ ವಸತಿ ಕಲ್ಪಿಸುವ ಆಸರೆ ಯೋಜನೆಯಡಿಯಲ್ಲಿ ಉತ್ತರ ಕರ್ನಾಟಕದ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಆಸರೆ ಮನೆಗಳನ್ನು ನಿರ್ಮಿಸಲಾಗುತ್ತಿದೆ.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ:

ಕೇಂದ್ರ ಸರ್ಕಾರದ ನೂತನ ಯೋಜನೆಯಾದ ರಾಜೀವ್ ಆವಾಸ್ ಯೋಜನೆಯಡಿ ರಾಜ್ಯಾದ್ಯಂತ ಕೊಳಚೆ ಪ್ರದೇಶದ ನಿವಾಸಿಗಳಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲು ಯೋಜನೆಗಳನ್ನು ರೂಪಿಸಲಾಗುವುದು.

ಬೆಂಗಳೂರು ಮಹಾನಗರ ನೀರು ಸರಬರಾಜು ವ್ಯವಸ್ಥೆ

47(151): ಶ್ರೀ ಹ್ಯಾರಿಸ್ ಎನ್. ಎ. (ಶಾಂತಿನಗರ): ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಶಾಸನ ರಚನೆ,